# ಬೆಲ್ ಸ್ಲೀವ್ಸ್ ಚೆಲುವು

**ನಿತ್ಯದ ಉಡುಗೆಗಳಿಗೆ ಹೆಚ್ಚು ಕಂಫರ್ಟ್ ಅನುಭವ ನೀಡುವ 'ಬೆಲ್ ಸ್ಲೀವ್ಸ್' ಸಭೆ ಸಮಾರಂಭಗಳಿಗೆ ತೊಡಲೂ ಆಪ್ಯಾಯಮಾನ. ಚೂಡಿದಾರ್, ಕುರ್ತಿ, ಶಾರ್ಟ್ ಟಾಪ್, ಫ್ರಾಕ್‌ಗಳಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತಿದ್ದ ಬೆಲ್ ಶೈಲಿ ಈಗೀಗ ಲೆಹೆಂಗಾ, ಸೀರೆ ಬ್ಲೌಸ್‌ಗಳಲ್ಲೂ ತನ್ನ ಪಾರಮ್ಯ ಮೆರೆದಿದೆ.**

■ ಸುಮಾ ಬಿ.



ಬೆಲ್ ಬಾಟಮ್; 70–80ರ ದಶಕದಲ್ಲಿ ಚಿತ್ರರಂಗವನ್ನಾಳಿದ ಫ್ಯಾಷನ್ ಟ್ರೆಂಡ್. ನಟ–ನಟಿಯರು ಬೆಲ್ ಬಾಟಮ್ ತೊಟ್ಟು ಬೀದಿಗಿಳಿದರೆಂದರೆ ಪ್ರೇಕ್ಷಕರ ಸಿಳ್ಳೆ– ಚಪ್ಪಾಳೆ ಸದ್ದು ಮುಗಿಲು ಮುಟ್ಟುತ್ತಿತ್ತು. ನಿಧಾನಕ್ಕೆ ಈ ಟ್ರೆಂಡ್ ಜನ ಸಾಮಾನ್ಯರ ಕಾಲನ್ನೂ ಆವರಿಸಿತು. ಬಹುಕಾಲದವರೆಗೂ ಟ್ರೆಂಡ್ ಆಗಿದ್ದ 'ಬೆಲ್' ಶೈಲಿ ತೋಳಿಗೂ ಏರಿತು. ಬೆಲ್ ಬಾಟಮ್ ರೀತಿ 'ಬೆಲ್ ಸ್ಲೀವ್ಸ್' ಕೂಡ ಫ್ಯಾಷನ್ ಜಗತ್ತನ್ನು ಆಳಿತು. ಇಂದಿಗೂ ಆಳುತ್ತಿದೆ. ಒಂದಷ್ಟು ವರ್ಷಗಳ ಕಾಲ 'ಬೆಲ್ ಬಾಟಮ್' ಮಿಂಚಿ ಮರೆಯಾಯಿತಾದರೂ, ಬೆಲ್ ಸ್ಲೀವ್ಸ್ ಇಂದಿಗೂ ವಿನ್ಯಾಸಕಾರರ ಕೈಚಳಕದಲ್ಲಿ ಹೊಸ ರೂಪು ಪಡೆಯುತ್ತ ಫ್ಯಾಷನ್ ಲೋಕದಲ್ಲಿ ತನ್ನ ಛಾಪನ್ನು ಮುದ್ರಿಸುತ್ತಿದೆ.

'ಗಂಟೆ' ಆಕಾರದಲ್ಲಿ ತೋಳುಗಳು, ಪ್ಯಾಂಟ್‌ಗಳು ವಿನ್ಯಾಸವಾಗಿರುವುದರಿಂದ 'ಬೆಲ್' ಬಾಟಮ್, ಬೆಲ್ ಸ್ಲೀವ್ಸ್ ಹೆಸರು ತಾನಾಗೇ ಒದಗಿ ಬಂದಿದೆ ಎಂದರೆ ತಪ್ಪಾಗಲಾರದು. ಜೀನ್ಸ್ ಜತೆಗೆ ಬೆಲ್ ಸ್ಲೀವ್ಸ್ ಟಾಪ್ ಅತ್ಯುತ್ತಮ ಕಾಂಬಿನೇಷನ್. ಅಂತಲೇ ಈ ಉಡುಗೆ ಕಾಲೇಜು ಹುಡುಗಿಯರಿಂದ ಹಿಡಿದು, ಕೆಲಸಕ್ಕೆ ಹೋಗುವ ಯುವತಿಯರು, ಮಹಿಳೆಯರನ್ನು ಆಕರ್ಷಿಸಿದೆ. ತೋಳುಗಳು ತುಸು ದಪ್ಪ ಇದ್ದರೆ ಅಥವಾ ಕೃಶವಾಗಿದ್ದರೆ ಬೆಲ್ ಸ್ಲೀವ್ಸ್ ಅವುಗಳನ್ನು ಮರೆಮಾಚುವುದರಿಂದ ಈ ಶೈಲಿ ಬಹುತೇಕರ ಮನ ಗೆದ್ದಿದೆ.

ನಿತ್ಯದ ಉಡುಗೆಗಳಿಗೆ ಹೆಚ್ಚು ಕಂಫರ್ಟ್ ಅನುಭವ ನೀಡುವ 'ಬೆಲ್ ಸ್ಲೀವ್ಸ್' ಸಭೆ ಸಮಾರಂಭಗಳ ಉಡುಗೆಗಳಿಗೂ ಆಪ್ಯಾಯಮಾನವಾಗಿದೆ. ಚೂಡಿದಾರ್, ಕುರ್ತಿ, ಶಾರ್ಟ್ ಟಾಪ್, ಫ್ರಾಕ್‌ಗಳಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತಿದ್ದ ಬೆಲ್ ಶೈಲಿ ಈಗೀಗ ಲೆಹೆಂಗಾ, ಸೀರೆ ಬ್ಲೌಸ್‌ಗಳಲ್ಲೂ ತನ್ನ ಪಾರಮ್ಯ ಮೆರೆದಿದೆ. ಗ್ರ್ಯಾಂಡ್ ಎಂಬ್ರಾಯಿಡರಿ ವರ್ಕ್, ಪ್ಯಾಚ್ ವರ್ಕ್, ಲೇಸ್ ವರ್ಕ್‌ಗಳಿಗೆ 'ಬೆಲ್ ಸ್ಲೀವ್' ಶೈಲಿ ಹೇಳಿ ಮಾಡಿಸಿದಂತಿರುತ್ತದೆ. ಇದು ಈಗ ಹೊಸ ಟ್ರೆಂಡ್ ಸೃಷ್ಟಿಸಿದೆ. ಎಲ್‌ಬೋ ಸ್ಲೀವ್ಸ್, ಶಾರ್ಟ್ ಸ್ಲೀವ್ಸ್, ತ್ರೀಫೋರ್ತ್ ಸ್ಲೀವ್ಸ್ ಹೀಗೆ ಎಲ್ಲ ಬಗೆಯ ವಿನ್ಯಾಸಗಳಿಗೂ ಬೆಲ್ ಸ್ಲೀವ್ ಹೆಚ್ಚು ಹೊಂದಿಕೊಳ್ಳುವುದರಿಂದ ವಿನ್ಯಾಸಕಾರರ, ಫ್ಯಾಷನ್ ಪ್ರಿಯರ ನೆಚ್ಚಿನ ಆಯ್ಕೆಯಾಗಿದೆ.

ಭುಜದಿಂದ ಮೊಣಕೈವರೆಗೂ ಸಾದಾ ತೋಳು, ನಂತರ ಅಗಲವಾದ ಬೆಲ್ ಶೈಲಿ ವಿನ್ಯಾಸ ಮಾಡಿಸುವುದು ಸಾಮಾನ್ಯ ಎಂಬಂತಾಗಿದೆ. ಫ್ಯಾಷನ್ ಪ್ರಿಯರನ್ನು ಹೆಚ್ಚು ಆಕರ್ಷಿಸಿರುವುದು ಇದೇ ಶೈಲಿ. ಲೆಹೆಂಗಾ, ಸೀರೆ ಬ್ಲೌಸ್, ಕುರ್ತಾ, ಚೂಡಿ ಹೀಗೆ ಎಲ್ಲ ಬಗೆಯ ಉಡುಪಿಗೆ ಇದು ಹೆಚ್ಚು ಹೊಂದುತ್ತದೆ. ಇನ್ನು ಭುಜದಿಂದ ಸಣ್ಣ ಸಣ್ಣ ನೆರಿಗೆ ಇಟ್ಟು ಮುಂದೆ ಅಗಲವಾಗುತ್ತ ಮುಂಗೈವರೆಗೂ ಚಾಚಿಕೊಂಡಿರುವ ವಿನ್ಯಾಸವೂ ಬಹುತೇಕರನ್ನು ಆಕರ್ಷಿಸಿದೆ. ಶಿಫಾನ್, ಜಾರ್ಜೆಟ್, ಸಿಲ್ಕ್, ಸಿಂಥೆಟಿಕ್ ಹೀಗೆ ಎಲ್ಲ ಬಗೆಯ ಬಟ್ಟೆಗಳಿಗೂ ಈ ಶೈಲಿ ಹೊಂದಿಕೆಯಾಗುತ್ತದೆ.